# ಬಾಲಿವುಡ್ ಕಾ 'ಪ್ರಾಣ್' ಚಲಾಗಯಾ...






**ಚಿಲ್ಲಾಯಿಯೇ ಮತ್ ಸಾಬ್ ಗಲಾ ಖರಾಬ್ ಹೋ ಜಾಯೇಗಾ....**

ಪರದೆಯ ಮೇಲೆ ಈ ಡೈಲಾಗ್ ಕೇಳಿದ ಇನ್‌ಸ್ಪೆಕ್ಟರ್ ಪಾತ್ರಧಾರಿ ಅಮಿತಾಭ್ ದಂಗುಬಡಿದು ನಿಲ್ಲುವ ದೃಶ್ಯ ಝಂಜೀರ್ ಸಿನಿಮಾ ನೋಡಿದವರ ಮನದಲ್ಲಿನ್ನೂ ಉಳಿದಿದೆ. ಈ ಖಡಕ್ ಗಂಡು ದನಿಗೆ ಚಿತ್ರಮಂದಿರದ ಸೌಂಡ್ ಬಾಕ್ಸ್ ಗಡ ಗಡ ನಡುಗುತ್ತಿತ್ತು. ಪ್ರೇಕ್ಷಕನ ಎದೆ ಬೆಚ್ಚಿಬೀಳುತ್ತಿತ್ತು.

ಅದೇ ಗಡಸು ದನಿಯ ಶೇರ್‌ಖಾನ್ ಪಠಾಣ್ ಪಾತ್ರದ ಪ್ರಾಣ್, ತನ್ನ ಜಿಗರೀ ದೋಸ್ತ್‌ಗಾಗಿ 'ಯಾರೀ ಹೈ ಈಮಾನ್ ಮೇರಿ ಯಾರ್ ಮೇರಿ ಜಿಂದಗೀ...' ಎಂದು ಹಾಡುತ್ತ ಅಫಘಾನೀ ಹೆಜ್ಜೆ ಹಾಕುವುದು ಎಂಥವರ ಎದೆಯಲ್ಲೂ ಗೆಳೆತನದ ಹುರುಪು ಹುರಿಗಟ್ಟಿ ನಿಲ್ಲುವಂತೆ ಮಾಡಿತ್ತು. ಪ್ರಾಣ್ ವಿಲನ್ ಹೇಗೋ ಪೋಷಕ ಪಾತ್ರದಲ್ಲೂ ಅಷ್ಟೇ ಸಹಜ, ಪ್ರಖರ ಎನ್ನುವುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?.

ಮುಖ ಓರೆಯಾಗಿಸಿ ಒಂದು ಕಣ್ಣಿನ ಹುಬ್ಬನ್ನು ಮೇಲೇರಿಸಿ, ಕಣ್ಣಗಲಿಸಿದರೆ ಸಾಕು ಎದುರಿನ ಎಂಥ ಹೀರೋ ಕೂಡ ಫೀಕಾ ಎನಿಸುತ್ತಿದ್ದ. ತಮ್ಮ ಇಂಟೆನ್ಸ್ ಅಭಿನಯದಿಂದ ಸಿನಿ ವಿಲನ್ ಪಾತ್ರಕ್ಕೆ ದೊಡ್ಡ ಗತ್ತು ಮತ್ತು ವಜನ್ ತಂದು ಕೊಟ್ಟದ್ದು ಪ್ರಾಣ್ ಎಂದು ನಿಸ್ಸಂದೇಹವಾಗಿ ಹೇಳಬಹುದು.

**ಸಿನಿ ಪಯಣ:** ಪ್ರಾಣ್ ಕ್ರಿಶನ್ ಸಿಕಂದ್ ಗಣಿತದಲ್ಲಿ ತುಂಬ ಹುಷಾರೀ ಹುಡುಗ. ಫೋಟೋಗ್ರಾಫರ್ ಆಗಬೇಕೆನ್ನುವ ಕನಸಿನ ಹಿಂದೆ ಬಿದ್ದವ. ರಾಮ್ ಲೀಲಾ ನಾಟಕದಲ್ಲಿ ಸೀತೆಯ ಪಾತ್ರ ಮಾಡಿ ಬಣ್ಣದ ಲೋಕಕ್ಕೂ ಬಿದ್ದವ. ಆಗಲೇ ಪ್ರಾಣ್‌ಗೆ ಆಕಸ್ಮಿಕ ಎನ್ನುವಂತೆ ಲಾಹೋರಿನ ವಲೀ ಮೊಹಮ್ಮದ್ ವಲೀ ಎನ್ನುವ ಲೇಖಕನ ಪರಿಚಯವಾಯ್ತು. ಆ ಮೂಲಕವೇ ಅವರ ಆರ್ಕ್ ಲೈಟಿನ ಮಾಯಾಲೋಕದ ಸಾಂಗತ್ಯ ಶುರುವಾಯ್ತು.

1940ರಲ್ಲಿ ಬಂದ 'ಯಮ್ಲಾ ಜಾಟ್' ಎನ್ನುವ ಪಂಜಾಬಿ ಚಿತ್ರದ ಮೂಲಕ ಪ್ರಾಣ್ ಕ್ರಿಶನ್ ಸಿಕಂದ್‌ರ ಸಿನಿಮಾ ಯಾತ್ರೆ ಆರಂಭಗೊಂಡಿತು. ಸ್ವಲ್ಪ ಸಮಯದಲ್ಲೇ ಒಂದಷ್ಟು ಯಶಸ್ವಿ ಚಿತ್ರಗಳನ್ನು ನೀಡುವ ಮೂಲಕ ಪ್ರಾಣ್ ಲಾಹೋರ್ ಫಿಲಂ ಇಂಡಸ್ಟ್ರಿಯಲ್ಲಿ ಭಾರಿ ವಿಲನ್ ಆಗಿ ಹೆಸರಾದರು.1942ರಲ್ಲಿ ದಾಲಸುಖ್ ಪಾಂಚೋಲಿ ತಮ್ಮ 'ಖಾನ್‌ದಾನ್' ಎನ್ನುವ ಹಿಂದಿ ಚಿತ್ರದ ಮೂಲಕ ಪ್ರಾಣ್‌ಗೆ ನಾಯಕನ ಪಟ್ಟ ನೀಡಿದರು. ನೂರ್ ಜಹಾನ್ ಚಿತ್ರದ ನಾಯಕಿ. ಇದು ಪ್ರಾಣ್ ಹೀರೋ ಆಗಿ ಅಭಿನಯಿಸಿದ ಮೊದಲ ಹಿಂದಿ ಚಿತ್ರ.

1947ರಷ್ಟೊತ್ತಿಗೇ 22 ಚಿತ್ರಗಳಲ್ಲಿ ಅಭಿನಯಿಸಿದ ಪ್ರಾಣ್‌ಗೆ, ದೇಶ ವಿಭಜನೆಯ ಗೊಂದಲದಲ್ಲಿ ಮುಂದೆ ಕೆಲ ಕಾಲ ಚಿತ್ರಗಳಲ್ಲಿ ಅಭಿನಯಿಸಲಾಗಲಿಲ್ಲ. ಲಾಹೋರ್ ತೊರೆದ ಪ್ರಾಣ್ ಮುಂಬೈ ಮಹಾನಗರಿಗೆ ಸೇರಿದರು. 50ರ ದಶಕದಲ್ಲಿ ದಿಲೀಪಕುಮಾರ್, ರಾಜ್‌ಕಪೂರ್, ದೇವಾನಂದ್ ಮತ್ತಿತರರ ಘಟಾನುಘಟಿ ನಾಯಕ ನಟರುಗಳ ಚಿತ್ರಗಳಲ್ಲಿ ಖಾಯಂ ಖಳನಟರಾಗಿ ಮಿಂಚಿದರು. ದಿಲೀಪ್‌ಕುಮಾರ್ ಜತೆಗಂತೂ ಇವರದು ಅತ್ಯಂತ ಹೆಚ್ಚಿನ ನಟನಾ ನಂಟು. ಆಝಾದ್, ಮಧುಮತಿ, ದೇವದಾಸ್, ದಿಲ್ ದಿಯಾ ದರ್ದ್ ಲಿಯಾ, ರಾಮ್ ಔರ್ ಶಾಂ... ಈ ಜೋಡಿಯ ಪ್ರಮುಖ ಚಿತ್ರಗಳು. ಎಲ್ಲ ಚಿತ್ರಗಳು ಸೂಪರ್ ಹಿಟ್.

ರಾಜ್‌ಕಪೂರ್ ಜತೆ ಛಲಿಯಾ, ಜಿಸ್ ದೇಶ್ ಮೇ ಗಂಗಾ ಬೆಹತೀ ಹೈ ಮತ್ತಿತರ ಚಿತ್ರಗಳಲ್ಲಿ ಪ್ರಾಣ್ ಅಭಿನಯಿಸಿದ್ದಾರೆ. 70ರ ದಶಕದಲ್ಲೂ ಪ್ರಾಣ್ ಹೆಸರಾಂತ ಖಳ ನಟರೇ. ಅಮಿತಾಭ್ ಬಚ್ಚನ್ ಹೀರೋ ಆಗಿ ಅಭಿನಯಿಸಿದ ಮೊದಲ ಚಿತ್ರ 'ಝಂಜೀರ್' ಪ್ರಾಣ್ ಅಭಿನಯ ಪ್ರಾವೀಣ್ಯತೆಗೆ ಅತ್ಯಂತ ಪ್ರಮುಖ ಉದಾಹರಣೆ. ಆನಂತರದಲ್ಲಿ ಅಮಿತಾಭ್ ಜತೆ ಅಭಿನಯಿಸಿದ ಕಾಲಿಯಾ, ದೋಸ್ತಾನಾ, ನಸೀಬ್, ಡಾನ್, ಅಮರ್ ಅಕ್ಬರ್ ಆಂಥೋಣಿ, ಶರಾಬಿ, ಶಹನ್‌ಷಾ ಚಿತ್ರಗಳೂ ಹಿಟ್ ಆದವು. ಅಭಿನಯದ ದೃಷ್ಟಿಯಲ್ಲಿ ಅಮಿತಾಭ್ ಜತೆ ಜತೆ ಪ್ರಾಣ್ ಕೂಡ ನೆನಪಿನಲ್ಲುಳಿಯುತ್ತಾರೆ. 'ಉಪಕಾರ್' ಚಿತ್ರದಲ್ಲಿ ಬಹುವರ್ಷಗಳ ನಂತರ ಸಭ್ಯ ಪಾತ್ರವೊಂದನ್ನು ಪ್ರಾಣ್ ಅಭಿನಯಿಸಿದರು. ಸಮಾಜ, ದೇಶ, ಉಪಕಾರ, ಪುಣ್ಯ ಭಾವನೆಗಳಿಂದ ಜಿಗುಪ್ಸೆಗೊಂಡಂತಿರುವ ಮತ್ತು ವೇದಾಂತಿಯಂತೆಯೂ ಅನ್ನಿಸುವ ಒಂದು ವಿಭಿನ್ನ ಪಾತ್ರವದು. ಬಗಲಲ್ಲಿ ಕಟ್ಟಿಗೆಯ ಸ್ಟ್ರೆಚರ್ ಹಿಡಿದು ಕುಂಟುತ್ತ 'ಕಸ್ಮೇ ವಾದೇ ಪ್ಯಾರ್ ವಫಾ...' ಎನ್ನುವ ಹಾಡಿಗೆ (ಮನ್ನಾಡೆ ಧ್ವನಿ) ಅಭಿನಯಿಸಿದ ಪರಿ ಮನತಟ್ಟುವಂಥದು. ಆ ಪಾತ್ರ ಪೋಷಣೆಯ ಮನೋಜ್ಞತೆ ಬಹುಕಾಲ ನೆನಪಿನಲ್ಲುಳಿಯುವಂಥದು.

ಹೀಗೆ ಅಭಿನಯದ ಏರುಗ್ರಾಫ್‌ನಲ್ಲೇ ಸತತ ಉಳಿದ ಪ್ರಾಣ್, 60, 70 ಮತ್ತು 80 ರ ದಶಕದಲ್ಲಿ ತಮ್ಮ ಜತೆಗೆ ಅಭಿನಯಿಸುವ ಹೀರೋ ಪಾತ್ರದ ನಟರಿಗಿಂತ ಹೆಚ್ಚಿನ ಸಂಭಾವನೆ ಪಡೆಯುತ್ತಿದ್ದರು. ಅಮಿತಾಭ್, ವಿನೋದ್ ಖನ್ನಾ, ರಿಷಿ ಕಪೂರ್ ಮತ್ತಿತರ ನಾಯಕ ನಟರಿಗಿಂತ ಹೆಚ್ಚಿನ ಸಂಭಾವನೆ ಪಡೆಯುತ್ತಿದ್ದರು.

**ಪ್ರಶಸ್ತಿಗಳು:** ಮೂರು ಬಾರಿ ಫಿಲಂಫೇರ್ ಪ್ರಶಸ್ತಿಗಳನ್ನು ಪಡೆದ ಪ್ರಾಣ್, ಒಮ್ಮೆ ಅದನ್ನು ತಿರಸ್ಕರಿಸಿದರು. ಪದ್ಮಭೂಷಣ ಪ್ರಶಸ್ತಿಯೂ ಅವರಿಗೆ ಸಂದಿದೆ. ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ 2013ರಲ್ಲಿ ಸಂದಿತ್ತು.

### ಸದಾ ನೆನಪಲ್ಲುಳಿವ ಪ್ರಾಣ್ ಡೈಲಾಗ್‌ಗಳು.

ಮೈ ಭೀ ಪುರಾನಾ ಖಿಡಿಮಾರ್ ಹ್ಞೂಂ, ಪರ್ ಕತರ್‌ನೇ ಅಚ್ಚೇ ತರಹ ಸೇ ಜಾಂತಾಹ್ಞೂಂ... -ಚಿತ್ರ: ಶೀಷ್‌ಮಹಲ್

ಟೋಕಿಯೋ ಮೆ ರೆಹತೇ ಹೋ, ಪರ್ ಟೋಕನೇಕಿ ಆದತ್ ನಹೀ ಗಯೀ.... -ಚಿತ್ರ: ಆರೌಂಡ್ ದಿ ವರ್ಲ್ಡ್

ಔರ್ ಕರ್‌ಲೇ ಉಪಕಾರ್. ಮೈ ನೇ ಕಹಾ ಥಾ, ಪೆಹಲೇ ಅಪನೀ ಸೋಚ್. ಗಾಂವ್ ವಾಲೇ ತುಝೇ ಜೂತಿಯೋಂಸೇ ಮಾರೆಂಗೆ ಔರ್ ಗಿನೇಂಗೆ ತಕ್ ನಹೀ! -ಚಿತ್ರ: ಉಪಕಾರ್

ಪ್ಯಾರ್ ಮೇ ತೊ ಬೂಢಾ ಭೀ ಜವಾನ್ ಲಗ್ತಾ ಹೈ.... -ಚಿತ್ರ: ಕರ್ಜ್

ಆಜ್ ಕೀ ದುನಿಯಾ ಮೇ ಅಗರ್ ಜಿಂದಾ ರೆಹನಾ ಹೈ ತೋ ದುನಿಯಾ ಕಾ ಬಟನ್ ಅಪ್ನೇ ಹಾಥ್ ಮೇ ರಖನಾ ಪಡ್ತಾ ಹೈ. -ಚಿತ್ರ: ಶರಾಬಿ

■ ದಿಲ್